# ಉಪ ತಹಶೀಲ್ದಾರರ ನ್ಯಾಯಾಲಯ, ಹಂಪಸಾಗರ-583214

**OFFICE OF THE DEPUTY TAHASILDAR, HAMPASAGARA-583214**

**ಎ.ವಿಲೇ.ನಂ.ಕಂ.ಪಹಣಿ.ವಿವಾದ/56/2015-16** **ದಿನಾಂಕ: 28.07.2016**

**ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.**
**ಉಪತಹಶೀಲ್ದಾರರು**
**ನಾಡ ಕಛೇರಿ ಹಂಪಸಾಗರ**

**ವಾದಿ (ಶ್ರೀ/ಶ್ರೀಮತಿ)**

ಕೋಡಿಹಳ್ಳಿ ಗಂಗಮ್ಮ ಗಂಡ ಕೋಡಿಹಳ್ಳಿ ಪ್ರಕಾಶ ಹಾಳ ತಿಮ್ಮಲಾಪುರ ಗ್ರಾಮ ಹಡಗಲಿ ತಾಲೂಕು

(ಶ್ರೀ ಅಶೋಕ ಕಣಿಕೇರಿ ವಕೀಲರು ಹಬೊ ಹಳ್ಳಿ)

**ಪ್ರತಿವಾದಿ (ಶ್ರೀ/ಶ್ರೀಮತಿ)**

ಬಣಕಾರ ಪಂಪಣ್ಣ ತಂದೆ ಭೀಮಪ್ಪ ಬನ್ನಿಕಲ್ಲು ಗ್ರಾಮ ಹಬೋ ಹಳ್ಳಿ ತಾಲೂಕು

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಏಣ್ಗಿ ಬಸಾಪುರ | 23/ಎ | 5.58 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಏಣ್ಗಿ ಬಸಾಪುರ ಗ್ರಾಮದ ಸ.ನಂ. 23/ಎ ವಿಸ್ತೀರ್ಣ 5.58 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ನೊಂದಣಿ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್25/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ: 05.04.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಕನ್ನಿಹಳ್ಳಿ ಯಲ್ಲವ್ವ ಗಂಡ ಲೇಟ್ ಕನ್ನಿಹಳ್ಳಿ ಕೊಟ್ರಪ್ಪ ಇವರ ಜಮೀನಾಗಿದ್ದು ಸದರಿಯವರಿಂದ ವಾದಿಗಳು ದಿನಾಂಕ:01.01.2016 ರಂದು ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ 3407/2015-16 ರ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ ಸದರಿ ಕ್ರಯ ನೊಂದಣಿ ದಸಾವೇಜು ಪ್ರಕಾರ ಕ್ರಯದಾರರಾದ ವಾದಿಗಳ ಹೆಸರಿಗೆ ಹಕ್ಕು ಬದಕಲಾವಣೆ ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು ದಿನಾಂಕ:13.01.2016 ರಂದು ಲಿಖಿತ ತಕರಾರನ್ನು ಸಲ್ಲಿಸುತ್ತಾ ಪ್ರಸ್ತುತ ವ್ಯಾಜ್ಯದ ಜಮೀನಿನ ವಿಕ್ರಯದಾರರಾದ ಕನ್ನಿಹಳ್ಳಿ ಯಲ್ಲಮ್ಮ ಗಂಡ ಲೇಟ್ ಕೊಟ್ರಪ್ಪ ಇವರು ಬಣಕಾರ ಪಂಪಾಪತಿ ತಂದೆ ಬೀಮಪ್ಪ ಹಾಗೂ ಬಣಕಾರ ನಾಗರಾಜ ತಂದೆ ಭೀಮಪ್ಪ ಇವರುಗಳಿಗೆ ವಿಲ್ಲು ನೊಂದಣಿ ಮಾಡಿಸಿದ್ದು ಪ್ರಸ್ತುತ ಹಕ್ಕುಬದಲಾವಣೆಯನ್ನು ಮಾಡದಂತೆ ಕೋರಿರುತ್ತಾರೆ.

K ಗಂಗಮ್ಮ

ವಿಚಾರಣೆಗೆ ಪ್ರತಿವಾದಿಗಳು ಸತತವಾಗಿ ಗೈರು ಹಾಜರಾಗಿದ್ದು ವಾದಿಗಳು ಮಂಡಿಸಿದ ವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇರೆಗೆ ಆದೇಶಿಸಲು ತೀರ್ಮಾನಿಸಲಾಯಿತು. ದಾಖಲೆಗಳ ಪರಿಶೀಲನೆ ವೇಳೆ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

1. ವ್ಯಾಜ್ಯದ ಜಮೀನು ಮೂಲತಃ ಕನ್ನಿಹಳ್ಳಿ ಯಲ್ಲವ್ವ ಗಂಡ ಲೇಟ್ ಕನ್ನಿಹಳ್ಳಿ ಕೊಟ್ರಪ್ಪ ಇವರ ಜಮೀನಾಗಿರುವುದು ಕಂಡುಬಂದಿರುತ್ತದೆ.
2. ವ್ಯಾಜ್ಯದ ಜಮೀನನ್ನು ಮೂಲ ಪಟ್ಟಾದಾರರಾದ ಕನ್ನಿಹಳ್ಳಿ ಯಲ್ಲವ್ವ ಗಂಡ ಲೇಟ್ ಕನ್ನಿಹಳ್ಳಿ ಕೊಟ್ರಪ್ಪ ಇವರಿಂದ ನೊಂದಣಿ ಕ್ರಯ ದಸ್ತಾವೇಜು ಸಂಖ್ಯೆ 3407/2015-16 , ದಿನಾಂಕ01.01.2016 ರ ಮೇರೆಗೆ ಕೋಡಿಹಳ್ಳಿ ಗಂಗಮ್ಮ ಗಂಡ ಲೇಟ್ ಪ್ರಕಾಶ ಇವರು ಕ್ರಯಕ್ಕೆ ಪಡೆದಿರುತ್ತಾರೆ.
3. ಪ್ರಸ್ತುತ ಜಮೀನಿನ ಡಯಾಗ್ಲಾಟ್ ಪ್ರತಿಯನ್ನು ಪರಿಶೀಲಿಸಲಾಗಿ ಪಟ್ಟಾ ಜಮೀನಾಗಿರುವುದು ಕಂಡುಬಂದಿರುತ್ತದೆ.
4. ಪ್ರತಿವಾದಿಗಳು ಪಟ್ಟಾದಾರರು ಇತರರಿಗೆ ನೊಂದಣಿ ವಿಲ್ಲು ಮಾಡಿಸಿರುವುದಾಗಿ ತಿಳಿಸಿರುತ್ತಾರೆ ಆದರೆ ಸದರಿಯವರು ಪ್ರಸ್ತುತ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆ.
5. ಕ್ರಯದಾರರು ಹಡಗಲಿ ತಾಲೂಕು ಹಾಳತಿಮಲಾಪುರ ಗ್ರಾಮದ ಸ.ನಂ.22ಬಿ/4 ವಿಸ್ತೀರ್ಣ 3.20 ಎಕರೆ ಜಮೀನನ್ನು ಹೊಂದಿದ್ದು ಸದರಿಯವರು ವ್ಯವಸಾಯಗಾರ ಕುಟುಂಬದ ಸದಸ್ಯರು ಎಂಬುದಕ್ಕೆ ಧೃಡೀಕರಣ ಪತ್ರವನ್ನು ಪಡೆದಿರುತ್ತಾರೆ. ಸದರಿ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಉಪ ತಹಶೀಲ್ದಾರರ ಕಾರ್ಯಾಲಯ * ಹಂಪಸಾಗರ *

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವಾದಿಗಳು ಮಂಡಿಸಿದ ವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಪ್ರಸ್ತುತ ಜಮೀನನ್ನು ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ 3407/2015-16 ದಿನಾಂಕ:01.01.2016 ರ ಮೇರೆಗೆ ಕ್ರಯದಾರರ ಹೆಸರಿಗೆ ಖಾತೆ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ.

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಏಣ್ಗಿ ಬಸಾಪುರ ಗ್ರಾಮದ ಸ.ನಂ. 23/ಎ ವಿಸ್ತೀರ್ಣ 5.58 ಎಕರೆ ಜಮೀನನ್ನು ನೊಂದಣಿ ದಸ್ತಾವೇಜು ಸಂಖ್ಯೆ 3407/2015-16 ದಿನಾಂಕ:01.01.2016 ರ ಮೇರೆಗೆ ಕ್ರಯದಾರರಾದ ಕೋಡಿಹಳ್ಳಿ ಗಂಗಮ್ಮ ಗಂಡ ಕೋಡಿಹಳ್ಳಿ ಪ್ರಕಾಶ ಇವರ ಹೆಸರಿಗೆ ಖಾತೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ:28 .07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

DESPATCHED

28/07

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ಹಂಪಸಾಗರ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.